**ದಿನಾಂಕ: 23.03.2022 ರಂದು 11-00 ಗಂಟೆಗೆ ಡಾ. ಸುರೇಶ್, ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್-179 (ಶಾಖಾಂಬರಿನಗರ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾರ್ಡ್-179ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ ರಸ್ತೆ ಕಾಮಗಾರಿಗಳ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

### : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| **ಅಧ್ಯಕ್ಷರು** | ನೋಡಲ್ ಅಧಿಕಾರಿ |
| **ಸದಸ್ಯ ಕಾರ್ಯದರ್ಶಿ** | ವಾರ್ಡ್ 179ರ ಸಹಾಯಕ ಅಭಿಯಂತರರು |
| **ಸದಸ್ಯರುಗಳು** | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| **ಸದಸ್ಯರುಗಳು** | ಜೆ.ಪಿ.ನಗರ ಬೆಸ್ಕಾಂ ಅಭಿಯಂತರರು |
| **ಸದಸ್ಯರುಗಳು** | ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು |
| **ಸದಸ್ಯರುಗಳು** | ಅರಣ್ಯ ಸಂರಕ್ಷಣಾಧಿಕಾರಿಗಳು |
| **ಸದಸ್ಯರುಗಳು** | ಬೀದಿ ದೀಪ ನಿರ್ವಹಣಾ ಅಭಿಯಂತರರು |
| **ಸದಸ್ಯರುಗಳು** | ಜೆ.ಪಿ.ನಗರ ಸಹಾಯಕ ಕಂದಾಯ ಅಧಿಕಾರಿಗಳು |
| **ಸದಸ್ಯರುಗಳು** | ರಸ್ತೆ ಮೂಲಭೂತ ಸೌಕರ್ಯ (ದಕ್ಷಿಣ) |
| **ಸದಸ್ಯರುಗಳು** | ಯೋಜನೆ (ದಕ್ಷಿಣ) |
| **ಸದಸ್ಯರುಗಳು** | ಠಾಣಾಧಿಕಾರಿಗಳು, ನ್ಯಾಯ ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ |
| **ಸದಸ್ಯರುಗಳು** | ಬೃಹತ್ ನೀರುಗಾಲುವೆ ಅಭಿಯಂತರರು |
| **ಸದಸ್ಯರುಗಳು** | ತೋಟಗಾರಿಕಾ ಅಧೀಕ್ಷಕರು (ದಕ್ಷಿಣ) |
| **ಸದಸ್ಯರುಗಳು** | ನಾಗರೀಕ ಕಲ್ಯಾಣ ಸಂಘ |

## :ನಡಾವಳಿಯ ವರದಿ:

➢ ಸದಸ್ಯ ಕಾರ್ಯದರ್ಶಿಗಳಾದ ಶ್ರೀಮತಿ ಅನುಷಾ .ಎ.ಎಂ. ಸಹಾಯಕ ಇಂಜಿನಿಯರ್ ವಾರ್ಡ್ 179 ಶಾಖಾಂಬರಿನಗರ, ಜೆ.ಪಿ.ನಗರ ಉಪವಿಭಾಗ ರವರು ಮಾತನಾಡುತ್ತಾ ಸಭೆಗೆ ಹಾಜರಾದ ವಾರ್ಡ್ ಸಮಿತಿಯ ಮಾನ್ಯ ಅಧ್ಯಕ್ಷರು, ಸದಸ್ಯರು ಹಾಗೂ ಪಾಲಿಕೆಯ ಮತ್ತು ಎಲ್ಲಾ ಇಲಾಖೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**

- ➢ 47ನೇ ಅಡ್ಡರಸ್ತೆಯಲ್ಲಿ ರಸ್ತೆ ಡಾಂಬರೀಕರಣ ಕೈಗೊಳ್ಳುವಂತೆ ಚರ್ಚಿಸಲಾಯಿತು.
  **ಕ್ರಮ :- ಮೇಜರ್ ರೋಡ್**
- ➢ 46ನೇ ಅಡ್ಡರಸ್ತೆಯ 1ನೇ ಮುಖ್ಯರಸ್ತೆಯಿಂದ ಸಂಗಮ್ ಸರ್ಕಲ್‌ಗಳಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಕೋರಲಾಯಿತು **ಕ್ರಮ :- ಸಹಾಯಕ ಅಭಿಯಂತರರು ವಾರ್ಡ್ 179.**

- 39ನೇ ಅಡ್ಡರಸ್ತೆ, ಸಹಸ್ರ ಹಾಸ್ಪಿಟಲ್ ಎದುರು ದೊಡ್ಡದಾದ ರಸ್ತೆ ಗುಂಡಿ ಬಿದ್ದಿದ್ದು ಅದನ್ನು ಮುಚ್ಚುವಂತೆ ಸೂಚಿಸಲಾಯಿತು. **ಕ್ರಮ :- ಸಹಾಯಕ ಅಭಿಯಂತರರು ವಾರ್ಡ್ 179.**
- ಸಂಗಮ್ ಸರ್ಕಲ್‌ನಿಂದ 40ನೇ ಅಡ್ಡರಸ್ತೆವರೆಗೆ ಫುಟ್‌ಪಾತ್ ರಿಪೇರಿ ಮಾಡುವಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. **ಕ್ರಮ :- ಮೇಜರ್ ರೋಡ್**
- ಟ್ರಾನ್ಸ್‌ಫಾರ್ಮರ್‌ಗಳನ್ನು ಬೇರೆ ಕಡೆಗಳಲ್ಲಿ ಬದಲಿ ಮಾಡಲು ಹಾಗೂ ಸಿಂಗಲ್ ಪೋಲ್‌ಗಳನ್ನು ಅಳವಡಿಸುವಂತೆ ಕೋರಲಾಯಿತು. **ಕ್ರಮ :- ಬೆಸ್ಕಾಂ ಕಛೇರಿ.**
- ಕಸದ ಗಾಡಿಗಳಿಗೆ ಟಾರ್ಪಲಿನ್‌ಅನ್ನು ಹೋದಿಸುವಂತೆ ಕೋರಲಾಯಿತು.

  **ಕ್ರಮ :- ಎಸ್‌ಡಬ್ಲ್ಯೂಎಂ.**
- 46ನೇ ಅಡ್ಡರಸ್ತೆಯಿಂದ ರಾಘವೇಂದ್ರ ಸ್ವಾಮಿ ದೇವಸ್ಥಾನದವರೆಗೆ ರಾತ್ರಿ 10.00 ಗಂಟೆ ನಂತರ ವಿದ್ಯುತ್ ಅಡಚಣೆ ಉಂಟಾಗುವುದಾಗಿ ತಿಳಿಸಿರುತ್ತಾರೆ. **ಕ್ರಮ :- ಬೆಸ್ಕಾಂ**
- 46ನೇ ಅಡ್ಡರಸ್ತೆಯಲ್ಲಿ ಮನೋಜ್ ಎಂಬುವವರ ಮನೆ ಮುಂದೆ ಮರವನ್ನು ತೆರವುಗೊಳಿಸುವಂತೆ ಕೋರಲಾಯಿತು. **ಕ್ರಮ : ಅರಣ್ಯ ಇಲಾಖೆ, ಬಿಬಿಎಂಪಿ (ದಕ್ಷಿಣ)**
- ಶಾಖಾಂಬರಿನಗರದ ಕೆಲವು ಪ್ರದೇಶದಲ್ಲಿ ವಾಟರ್ ಮೀಟರ್ ಕಳ್ಳತನವಾಗುವ ಬಗ್ಗೆ ತಿಳಿಸಿರುತ್ತಾರೆ. **ಕ್ರಮ:- ಬಿಡಬ್ಲ್ಯೂಎಸ್‌ಎಸ್‌ಬಿ ಹಾಗೂ ಜೆ.ಪಿ.ನಗರ ಪೊಲೀಸ್ ಠಾಣೆ(ಕಾನೂನು ಮತ್ತು ಸುವ್ಯವಸ್ಥೆ)**
- ವಾರ್ಡ್ ನಂ. 179ರ ಕೆಲವು ಕಡೆಗಳಲ್ಲಿ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸದ ಸಮಸ್ಯೆಗಳು ಕಂಡುಬಂದಿದ್ದು, ಸರಿಯಾಗಿ ವಿಲೇವಾರಿ ಮಾಡಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. **ಕ್ರಮ :- ಎಸ್‌ಡಬ್ಲ್ಯೂಎಂ (ಜಯನಗರ)**

- ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಬೆಳಿಗ್ಗೆ 11.00 ಘಂಟೆಗೆ ಇದೇ ರೀತಿಯಾಗಿ ಮಾಸಿಕ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು.

- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ಜೆ.ಪಿ.ನಗರ) ಉಪವಿಭಾಗದ ಶ್ರೀಮತಿ ಅನುಷಾ .ಎ.ಎಂ. ಸಹಾಯಕ ಇಂಜಿನಿಯರ್ ವಾರ್ಡ್ 179 ಶಾಖಾಂಬರಿನಗರ, ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Anusha A M 23/3

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು ವಾರ್ಡ್ 179
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ